# ಈ ಆಟಗಾರ್ತಿ ಕ್ರೀಡಾಲೋಕದ 'ಕಿಂಗ್'!



■ ಪ್ರವೀಣ ಕುಲಕರ್ಣಿ

ಯುಎಸ್ ಗ್ರ್ಯಾನ್ ಸ್ಲಾಮ್ ಚಾಂಪಿಯನ್‌ಷಿಪ್‌ನಲ್ಲಿ ವಿಜೇತರಾಗುವ ಪುರುಷ ಹಾಗೂ ಮಹಿಳಾ ಟೆನಿಸ್‌ಪಟುಗಳಿಬ್ಬರಿಗೂ ಸಮಾನ ಬಹುಮಾನ ನೀಡುವ ಪರಿಪಾಟ ಆರಂಭಿಸಿ ಇದೀಗ ಐವತ್ತು ವರ್ಷ. ಅದರೊಟ್ಟಿಗೆ ಕಾಲವು ಸರ್ರನೇ ಐದು ದಶಕ ಹಿಂದೆ ಸರಿದು ಈ ಐತಿಹಾಸಿಕ ಕ್ರಮಕ್ಕೆ ಕಾರಣವಾದ ಆ ಅವಿಸ್ಮರಣೀಯ ಘಟನೆಯನ್ನು ಮತ್ತೆ ಹಸಿರಾಗಿಸಿದೆ.

ಅದು 1972ನೇ ಇಸ್ವಿ. ಮಹಾನ್ ಟೆನಿಸ್ ತಾರೆ ಬಿಲ್ಲಿ ಜೀನ್ ಕಿಂಗ್ ಆಗ ಯುಎಸ್ ಗ್ರ್ಯಾನ್ ಸ್ಲಾಮ್ ಮಹಿಳಾ ವಿಭಾಗದ ಸಿಂಗಲ್ಸ್ ಪ್ರಶಸ್ತಿ ಜಯಿಸಿದ್ದರು. ಜಯಶಾಲಿಯಾದವರು 'ಸಾಮಾನ್ಯವಾಗಿ ಮತ್ತೆ ಪ್ರಶಸ್ತಿ ಗೆಲ್ಲಲಿದ್ದೇನೆ' ಎಂಬ ಆಶಾವಾದ ವ್ಯಕ್ತಪಡಿಸುವುದುಂಟು. ಆದರೆ, ಬಿಲ್ಲಿ, 'ಮುಂದಿನ ವರ್ಷ ಪ್ರಾಯಶಃ ನಾನು ಆಡುವುದಿಲ್ಲ. ಉಳಿದ ಯಾವ ಮಹಿಳಾ ಕ್ರೀಡಾಪಟುವೂ ಇಲ್ಲಿ ಆಡುವ ಸಾಧ್ಯತೆ ಇಲ್ಲ' ಎಂದು ಬೆದರಿಕೆ ಹಾಕಿದ್ದರು. ಅದಕ್ಕೆ ಏನು ಕಾರಣ ಗೊತ್ತೆ? ಪುರುಷರ ವಿಭಾಗದಲ್ಲಿ ಗೆದ್ದ ಐಲಿ ನಸ್ತಾಸೆ ಅವರಿಗೆ 15 ಸಾವಿರ ಡಾಲರ್ ಬಹುಮಾನ ಸಿಕ್ಕರೆ, ಮಹಿಳಾ ವಿಭಾಗದಲ್ಲಿ ಪ್ರಶಸ್ತಿ ಗೆದ್ದ ಬಿಲ್ಲಿ ಅವರಿಗೆ ಸಿಕ್ಕಿದ್ದು ಹತ್ತು ಸಾವಿರ ಡಾಲರ್ ಮಾತ್ರ!

ಬಿಲ್ಲಿ ಅವರ ಈ ಪ್ರತಿಭಟನಾತ್ಮಕ ಮಾತುಗಳು ಎಂತಹ ಅಲ್ಲೋಲ ಕಲ್ಲೋಲ ಉಂಟು ಮಾಡಿದ್ದವೆಂದರೆ ಸಂಘಟಕರು ಮರುವರ್ಷವೇ ಪುರುಷ ಮತ್ತು ಮಹಿಳಾ ವಿಜೇತರಿಗೆ ಸಮಾನ ಬಹುಮಾನ ಘೋಷಣೆ ಮಾಡಿದ್ದರು. ಆ ಘಟನೆ ನಡೆದು ಐವತ್ತು ವರ್ಷಗಳಾಗಿವೆ. ಇದಕ್ಕೆ ಕಾರಣರಾದ ಬಿಲ್ಲಿ ಈಗಲೂ ಸೆಲೆಬ್ರಿಟಿಯಂತೆ ಕಂಗೊಳಿಸುತ್ತಿದ್ದಾರೆ.

ಟೆನಿಸ್ ಜಗತ್ತಿನ ಸಾರ್ವಕಾಲಿಕ ಶ್ರೇಷ್ಠ ಆಟಗಾರ್ತಿಯರಲ್ಲಿ ಒಬ್ಬರೆನಿಸಿರುವ ಬಿಲ್ಲಿ ಅವರಷ್ಟು ಹರ್ಷಚಿತ್ತರಾದ ವ್ಯಕ್ತಿ ಸದ್ಯ ಬೇರೆ ಇರಲಿಕ್ಕಿಲ್ಲ. ಸಮಾನ ಬಹುಮಾನಕ್ಕೆ ಕಾರಣವಾದ ಹೆಮ್ಮೆ ಅವರಲ್ಲಿ ತುಂಬಿದೆ. ಅಂಗಳದ ಆಚೆಗಿನ ಚಟುವಟಿಕೆಗಳಿಂದಲೂ ಬಿಲ್ಲಿ ವಿಶಿಷ್ಟ ವ್ಯಕ್ತಿಯಾಗಿ ಕಂಗೊಳಿಸಿದವರು. ಕ್ರೀಡೆಯಲ್ಲಿ ಮಹಿಳೆಯರ ಹಕ್ಕುಗಳಿಗಾಗಿ, ಎಲ್‌ಜಿಬಿಟಿಕ್ಯೂ ಸಮುದಾಯದವರ ಹಕ್ಕುಗಳಿಗಾಗಿ ಬದುಕಿನ ಉದ್ದಕ್ಕೂ ಬಡಿದಾಡಿದವರು. 39 ಗ್ರ್ಯಾನ್ ಸ್ಲಾಮ್‌ಗಳನ್ನು ಗೆದ್ದ ಈ ಆಟಗಾರ್ತಿ, 'ಬ್ಯಾಟಲ್ ಆಫ್ ದಿ ಸೆಕ್ಸಸ್' ಎಂದೇ ಖ್ಯಾತವಾಗಿದ್ದ ಪಂದ್ಯದಲ್ಲಿ ಪುರುಷ ಆಟಗಾರ ಬಾಬಿ ರಿಗ್ಸ್ ಅವರನ್ನು ನೇರ ಸೆಟ್‌ಗಳಲ್ಲಿ ಸೋಲಿಸಿ ಪಾರಮ್ಯ ಮೆರೆದವರು. ಮಹಿಳಾ ಟೆನಿಸ್ ಸಂಸ್ಥೆಯ ಹುಟ್ಟಿಗೂ ಕಾರಣರಾದವರು.

ಶಾಲಾ ದಿನಗಳಲ್ಲಿಯೇ ಅಥ್ಲೀಟ್ ಆಗಿ ಸದ್ದು ಮಾಡಿದ ಬಿಲ್ಲಿ, ಬ್ಯಾಸ್ಕೆಟ್‌ಬಾಲ್ ಮತ್ತು ಸಾಫ್ಟ್‌ಬಾಲ್ ಕ್ರೀಡೆಗಳಲ್ಲೂ ತೊಡಗಿಸಿಕೊಂಡವರು. ಹನ್ನೊಂದರ ಹರೆಯದಲ್ಲಿ ಟೆನಿಸ್ ಆಡಲು ಆರಂಭಿಸಿದ ಅವರು, ಬಳಿಕ ಮಿಕ್ಕ ಕ್ರೀಡೆಗಳಿಗೆ ಗುಡ್‌ಬೈ ಹೇಳಿದರು. ಸಣ್ಣಪುಟ್ಟ ಕೆಲಸ ಮಾಡಿ ಸಂಪಾದಿಸಿದ ಹಣದಲ್ಲಿ ರಾಕೆಟ್ ಕೊಂಡುಕೊಂಡ ಅವರು, ಆ ಪುಟ್ಟ ವಯಸ್ಸಿನಲ್ಲೇ ಅಮ್ಮನಿಗೆ ಹೇಳಿದರು: 'ಅಮ್ಮ, ನಾನು ಮುಂದೊಂದು ದಿನ ವಿಶ್ವದ ನಂಬರ್ ಒನ್ ಆಟಗಾರ್ತಿ ಆಗುವೆ'.

ವಿಂಬಲ್ಡನ್, ಫ್ರೆಂಚ್, ಯುಎಸ್ ಮತ್ತು ಆಸ್ಟ್ರೇಲಿಯನ್ ಓಪನ್ ಹೀಗೆ ನಾಲ್ಕೂ ಗ್ರ್ಯಾನ್ ಸ್ಲಾಮ್‌ಗಳಲ್ಲಿ ಪ್ರಶಸ್ತಿ ಜಯಿಸಿದ ಹಿರಿಮೆ ಹೊಂದಿರುವ ಬಿಲ್ಲಿ, 1983ರಲ್ಲಿ ವೃತ್ತಿಪರ ಟೆನಿಸ್‌ಗೆ ವಿದಾಯ ಹೇಳಿದರೂ ತರಬೇತುದಾರರಾಗಿ ಮುಂದುವರಿದರು. ಅವರ ಮಾರ್ಗದರ್ಶನದಲ್ಲಿ ಅಮೆರಿಕ ಟೆನಿಸ್ ತಂಡ ಒಲಿಂಪಿಕ್ ಸ್ವರ್ಣ ಸೇರಿದಂತೆ ಹಲವು ಬಹುಮಾನಗಳನ್ನು ಗೆದ್ದಿತು. ಟಿ.ವಿ ಕಾಮೆಂಟೇಟರ್ ಆಗಿಯೂ ಅವರು ಕಾರ್ಯ ನಿರ್ವಹಿಸಿದರು. 1990ರ ದಶಕದ ಅಮೆರಿಕದ ಅತಿ ಮಹತ್ವದ ನೂರು ವ್ಯಕ್ತಿಗಳಲ್ಲಿ ಇವರ ಹೆಸರೂ ಇತ್ತು. ಅನನ್ಯ ಸಾಮಾಜಿಕ ಕಳಕಳಿಯ ಈ ಮಹಿಳೆ ರಾಷ್ಟ್ರೀಯ ಏಡ್ಸ್ ಪ್ರತಿಷ್ಠಾನದ ನಿರ್ದೇಶಕರಾಗಿಯೂ ಕೆಲಸ ಮಾಡಿದರು.

'ಹೌದು, ಬಹುಮಾನ ಮೊತ್ತದಲ್ಲಿ ತೋರುತ್ತಿದ್ದ ತಾರತಮ್ಯ ನನ್ನ ಮನಸ್ಸನ್ನು ಸಿಕ್ಕಾಪಟ್ಟೆ ಕದಡಿತ್ತು. ಈ ವಿಷಯ ನನ್ನ ಹೃದಯಕ್ಕೆ ಮೇಲಿಂದ ಮೇಲೆ ಇರಿಯುತ್ತಿತ್ತು. ಹೀಗಾಗಿ ನಾನು ಆ ತಾರತಮ್ಯದ ವಿರುದ್ಧ ಧ್ವನಿ ಎತ್ತಿದ್ದೆ' ಎಂದು ಬಿಲ್ಲಿ ಅಂದಿನ ಘಟನೆಯನ್ನು ನೆನಪಿಸಿಕೊಳ್ಳುತ್ತಾರೆ. ಪ್ರಾಯೋಜಕತ್ವದಲ್ಲಿ ಕಂಪನಿಗಳು ತೋರುತ್ತಿದ್ದ ತಾರತಮ್ಯದ ಮನೋಭಾವದ ವಿರುದ್ಧವೂ ಅವರು ಧ್ವನಿ ಎತ್ತಿದವರು. 80ರ ಹರೆಯದ ಬಿಲ್ಲಿ, ಈಗಲೂ ಕ್ರಿಯಾಶೀಲವಾಗಿ ದಿನ ಕಳೆಯುತ್ತಿರುವವರು. ಕೋವಿಡ್ ಅಲೆ ತೀವ್ರವಾದ ದಿನಗಳಲ್ಲಿ ರಾಕೆಟ್ ಹಿಡಿದು ಮತ್ತೆ ಟೆನಿಸ್ ಅಂಗಳಕ್ಕೆ ಇಳಿದಿದ್ದ ಅವರು, ಯುವ ಸಮುದಾಯದಲ್ಲಿ ಉತ್ಸಾಹವನ್ನು ತುಂಬಿದವರು. ಸಾಮಾಜಿಕ ನ್ಯಾಯದ ಪರ, ಲಿಂಗ ಸಮಾನತೆಯ ಪರ ಅಂಗಳದ ಆಚೆಗೆ ಇವರಷ್ಟು ಹೋರಾಡಿದ ಮತ್ತೊಬ್ಬ ಕ್ರೀಡಾಪಟು ಸಿಗುವುದು ಕಷ್ಟ ಎಂದು ಅಮೆರಿಕದ ಟೆನಿಸ್ ಲೋಕ ಒಕ್ಕೊರಲಿನಿಂದ ಹೇಳುತ್ತದೆ. ಅವರ ಹೋರಾಟದ ಯಶಸ್ಸಿಗೆ ಸಾಕ್ಷಿಯಾಗಿ ಈಗ ಯುಎಸ್ ಓಪನ್ ಗ್ರ್ಯಾನ್ ಸ್ಲಾಮ್‌ನಲ್ಲಿ ಸಮಾನ ಬಹುಮಾನದ ಸುವರ್ಣ ಸಂಭ್ರಮ ನಡೆಯುತ್ತಿದೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65